2016 ಕ.ತೀ.ವ 104

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಬಾಲಾಬಾಯಿ ಮತ್ತು ಇನ್ನೊಬ್ಬರು –ವಿರುದ್ಧ– ನಾರಾಯಣ ಕೃಷ್ಣ ಸಾಲುಂಕೆ ಹಾಗೂ ಇನ್ನೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಮೇಲ್ಮನವಿದಾರರ ಪತಿಯು ಎದುರುದಾರರೊಂದಿಗೆ ಕರಾರು ಪತ್ರವನ್ನು ಮಾಡಿಕೊಂಡು ತಮ್ಮ 3 ಎಕರೆ 16 ಗುಂಟೆ ಜಮೀನನ್ನು 1,60,000/– ರೂ.ಗಳಿಗೆ ವಿಕ್ರಯ ಮಾಡುವುದಾಗಿ ಒಪ್ಪಿಕೊಂಡು 1,30,000/– ರೂ.ಗಳಷ್ಟು ಮುಂಗಡ ಹಣವನ್ನು ಪಡೆದು 6 ತಿಂಗಳೊಳಗೆ ಜಮೀನಿನ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲು ಒಪ್ಪಿ ಜಮೀನಿನ ಸ್ವಾಧೀನವನ್ನು ಎದುರುದಾರರಿಗೆ ನೀಡಿರುತ್ತಾರೆ. ಆದರೆ ಆತ ಮೃತಪಟ್ಟದ್ದರಿಂದ ಕ್ರಯವನ್ನು ಪೂರ್ಣಗೊಳಿಸುವಂತೆ ಆತನ ವಾರಸುದಾರರಿಗೆ ಎದುರುದಾರರು ಸೂಚನಾ ಪತ್ರವನ್ನು ನೀಡಿದ್ದರೂ, ಕ್ರಯವನ್ನು ಪೂರ್ಣಗೊಳಿಸಲು ವಿಫಲರಾದ ಸಂದರ್ಭದಲ್ಲಿ ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ ಹೂಡಲಾಗಿ ದಾವೆಯು ಪುರಸ್ಕರಿಸಲ್ಪಡುತ್ತದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಮೇಲ್ಮನವಿದಾರರು ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಮೇಲ್ಮನವಿ ವಜಾಗೊಳಿಸಲ್ಪಡುತ್ತದೆ. ಕೆಳ ನ್ಯಾಯಾಲಯಗಳ ತೀರ್ಪನ್ನು ಪ್ರಶ್ನಿಸಿ ಸದರಿ ನಿಯತ ಎರಡನೇ ಮೇಲ್ಮನವಿ.

ಮೃತ ವ್ಯಕ್ತಿಯು ಕುಡಿತಕ್ಕೆ ಶರಣಾಗಿದ್ದನೆಂದು ಮೇಲ್ಮನವಿದಾರರು ಸಾಬೀತು ಮಾಡುವಲ್ಲಿ ವಿಫಲರಾಗಿದ್ದಾನೆಂದು ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯಾಧಾರಗಳನ್ನಾಧರಿಸಿ ನಿರ್ಣಯ ನೀಡಿದೆ. ಹಾಗೆಯೇ ಬಾಕಿ ಮೊತ್ತದ ಹಣವನ್ನು ನೀಡಲು ಎದುರುದಾರರು ಶಕ್ತರಾಗಿದ್ದರೆಂದು ಸಾಕ್ಷ್ಯಾಧಾರಗಳಿಂದ ಅಧಿವಿಚಾರಣಾ

*ಆರ್.ಎಸ್.ಎ. ಸಂಖ್ಯೆ: 100448/2014, ದಿನಾಂಕ: 9ನೇ ಏಪ್ರಿಲ್, 2015.

**ನ್ಯಾಯಾಲಯವು ನಿರ್ಣಯವನ್ನು ನೀಡಿರುತ್ತದೆ. ಸ್ವತ್ತಿನ ಮೇಲೆ ಋಣವಿರುವ ಅಂಶ ಕರಾರಿನ ಪಾಲನೆಯನ್ನು ಮಾಡಲು ಅಡ್ಡ ಬರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ : ಶ್ರೀ ವಿ.ಪಿ. ಕುಲಕರ್ಣಿ, ವಕೀಲರು;
ಸಿ/ಆರ್ 1 ಪರ: ಶ್ರೀ ರಾಮಚಂದ್ರ ಎ. ಮಾಲಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

1ನೇ ಮತ್ತು 2ನೇ ಪ್ರತಿವಾದಿಗಳು, ಅಥಣಿಯ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಇವರ ಕಡತದಲ್ಲಿನ ಒ.ಎಸ್.ಸಂಖ್ಯೆ 35/2002ರಲ್ಲಿ ನಿರ್ದಿಷ್ಟ ಪಾಲನೆಯ ಪರಿಹಾರಕ್ಕಾಗಿ ವಾದಿಯ ದಾವೆಯನ್ನು ಡಿಕ್ರಿಗೊಳಿಸುವಲ್ಲಿ ಎರಡು ಕೆಳ ನ್ಯಾಯಾಲಯಗಳು ನೀಡಿದ ಸಮವರ್ತಿ ನಿರ್ಣಯವನ್ನು ಪ್ರಶ್ನಿಸಿ, ಈ ಎರಡನೇ ಅಪೀಲನ್ನು ಸಲ್ಲಿಸಿದ್ದಾರೆ.

2. ಈ ಎರಡನೇ ಅಪೀಲಿಗೆ ಕಾರಣವಾಗುವ ಸಂಕ್ಷಿಪ್ತ ಸಂಗತಿಗಳೆಂದರೆ, ಮೂಲ ದಾವೆಯಲ್ಲಿನ 1ನೇ ಪ್ರತಿವಾದಿಯು ವಿಠೋಬ ಶಿರೋಳೆ ಎಂಬುವರ ಪತ್ನಿಯಾಗಿದ್ದು ಆಕೆ ವಿಧವೆಯಾಗಿರುತ್ತಾಳೆ. ಮೂಲ ದಾವೆಯ 2ನೇ ಪ್ರತಿವಾದಿಯು ಆಕೆಯ ಅತ್ತೆ ಶ್ರೀಮತಿ ಕಾಶೀಬಾಯಿ. ವಾದಿಯ ವಾದವೇನೆಂದರೆ, 1ನೇ ಪ್ರತಿವಾದಿಯ ಪತಿ, ಅಂದರೆ, ವಿಠೋಬ ಶಿರೋಳೆ 2ನೇ ಪ್ರತಿವಾದಿಯ ಮಗನು ಸಹ ಆಗಿದ್ದು, 1,60,000/– ರೂ. ಬೆಲೆಬಾಳುವ ಮೌಲ್ಯಕ್ಕಾಗಿ 3 ಎಕರೆ 16 ಗುಂಟೆಗಳ ವ್ಯಾಪ್ತಿಯವರೆಗಿನ ಅಳತೆಯ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮದಭಾವಿ ಗ್ರಾಮದ ಆರ್.ಎಸ್.ಸಂಖ್ಯೆ 492/2ನ್ನು ಹೊಂದಿರುವ ದಾವೆಯ ಅನುಸೂಚಿತ ಜಮೀನನ್ನು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ದಿನಾಂಕ 31.7.2001ರ ಮಾರಾಟ ಒಪ್ಪಂದದ ಮೇರೆಗೆ, ವಾದಿಯು ಮುಂಗಡ ಮಾರಾಟದ ಹಣವಾಗಿ ರೂ.1,30,000/– ಮೊತ್ತವನ್ನು ಪಾವತಿಸಿದ್ದು, ಅದಕ್ಕೆ ಪ್ರತಿಯಾಗಿ

ಅವನು ವಿಠೋಬ ಶಿರೋಲೆಯಿಂದ ದಾವೆಯ ಅನುಸೂಚಿತ ಸ್ವತ್ತಿನ ಸ್ವಾಧೀನವನ್ನು ಪಡೆದಿರುತ್ತಾನೆ. ಒಪ್ಪಂದದ ದಿನಾಂಕದಿಂದ ಆರು ತಿಂಗಳೊಳಗಾಗಿ ಮಾರಾಟ ಪ್ರಕ್ರಿಯೆ ಪೂರ್ಣಗೊಳ್ಳತಕ್ಕದ್ದೆಂದು ಹಾಗೂ ರೂ.30,000/– ಬಾಕಿ ಹಣವನ್ನು ಕ್ರಯಪತ್ರ ನೋಂದಣಿ ಮಾಡಿಸುವ ಸಮಯದಲ್ಲಿ ಪಾವತಿಸಬೇಕೆಂದು ಉಭಯ ಪಕ್ಷಕಾರರು ಒಪ್ಪಿಕೊಂಡಿರುತ್ತಾರೆ. ತರುವಾಯ, ದಿನಾಂಕ 31.7.2001ರ ಮಾರಾಟ ಒಪ್ಪಂದವು ಅಪೂರ್ಣವಾಗಿದ್ದಾಗಲೇ ಮಾರಾಟಗಾರನಾದ ವಿಠೋಬ ಶಿರೋಲೆಯು 21.6.2002ರಂದು ಮರಣ ಹೊಂದಿದ್ದು, ಬದುಕಿರುವ ತನ್ನ ವಿಧವೆ ಪತ್ನಿ–1 ನೇ ಪ್ರತಿವಾದಿ ಹಾಗೂ ತನ್ನ ತಾಯಿ–ಎರಡನೇ ಪ್ರತಿವಾದಿಯನ್ನು ತನ್ನ ಕಾನೂನು ಸಮ್ಮತ ವಾರಸುದಾರರನ್ನಾಗಿ ಬಿಟ್ಟುಹೋಗಿರುತ್ತಾನೆ. ಆದ್ದರಿಂದ, 1ನೇ ಮತ್ತು 2ನೇ ಪ್ರತಿವಾದಿಗಳಿಗೆ ಕಾನೂನು ಪ್ರಕಾರ ನೋಟೀಸು ಜಾರಿ ಮಾಡುವ ಮೂಲಕ ವಾದಿಯು ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಸಲ್ಲಿಸಿರುತ್ತಾನೆ.

3. ಸದರಿ ದಾವೆಯಲ್ಲಿ, ದಿನಾಂಕ 31.7.2001ರ ಮಾರಾಟದ ಒಪ್ಪಂದವನ್ನು ವಿಠೋಬ ಶಿರೋಲೆ ಮಾಡಿಕೊಂಡಿರುವುದಿಲ್ಲ, ಅದನ್ನು ವಾದಿಯೇ ಸೃಷ್ಟಿಸಿಕೊಂಡಿದ್ದಾನೆ. ವಿಠೋಬ ಶಿರೋಲೆಯು ಕುಡಿತ ಹಾಗೂ ಇತರ ಚಟಗಳಿಗೆ ಬಲಿಯಾಗಿದ್ದನೆಂದು, ವಾದಿಯು ಅದರ ದುರುಪಯೋಗವನ್ನು ಪಡೆದುಕೊಂಡು, ಖಾಲಿ ಹಾಳೆಯಲ್ಲಿ ಅವನ ಸಹಿ ಹಾಕಿಸಿಕೊಂಡಿರುತ್ತಾನೆ ಮತ್ತು ಆ ನಂತರ ಅದರ ಮೇಲೆ ಒಪ್ಪಂದ ಪತ್ರವನ್ನು ಸಿದ್ಧಪಡಿಸಿರುತ್ತಾನೆ ಎನ್ನುವಷ್ಟರಮಟ್ಟಿಗೆ 1ನೇ ಮತ್ತು 2ನೇ ಪ್ರತಿವಾದಿಗಳು ಪ್ರತಿವಾದಿಸಿದ್ದಾರೆ. ಅವರು ವಾದಿಯು ವಿಠೋಬ ಶಿರೋಲೆಗೆ ಮಾರಾಟದ ಭಾಗಶಃ ಹಣವನ್ನು ಪಾವತಿ ಮಾಡಿದ್ದಾನೆಂಬುದನ್ನು ಸಹ ನಿರಾಕರಿಸಿದ್ದಾರೆ. ಹಾಗಿದ್ದರೂ, ಅವನು ಅಮಲೇರಿದ ಮನಸ್ಥಿತಿಯಲ್ಲಿದ್ದಾಗ, ಅದರ ದುರುಪಯೋಗ ಪಡೆದುಕೊಂಡು ಮಾರಾಟ ಒಪ್ಪಂದದ ಮೇಲೆ ವಿಠೋಬ ಶಿರೋಲೆಯು ಸಹಿ ಹಾಕಿಸಿಕೊಳ್ಳಲಾಯಿತೆಂಬುದನ್ನು ಒಪ್ಪಿಕೊಳ್ಳಲಾಗಿದೆ.

4. ಮೇಲೆ ಹೇಳಲಾದ ವಾದಗಳಿಂದ ವಿವಾದಾಂಶಗಳನ್ನು ರೂಪಿಸಲಾಯಿತು, ತದನಂತರ, ವಿಷಯವನ್ನು ಅಧಿವಿಚಾರಣೆಗೆ ಕಳುಹಿಸಲಾಯಿತು. ಸದರಿ ದಾವೆಯಲ್ಲಿ

ವಾದಿಯು ಪಿ.ಡಬ್ಲ್ಯೂ.1 ಎಂಬುದಾಗಿ ತಾನೇ ಸ್ವತಃ ವಿಚಾರಣೆಗೊಳಪಟ್ಟಿದ್ದಾನೆ ಮತ್ತು ಮಾರಾಟದ ಒಪ್ಪಂದವನ್ನು ಬರೆದ ಹಾಗೂ ಅದಕ್ಕೆ ಸಾಕ್ಷಿದಾರರಾಗಿದ್ದ ಇತರ ಇಬ್ಬರು ಸಾಕ್ಷಿದಾರರನ್ನು, ಎಂದರೆ, ಕೃಷ್ಣಾಜಿ ದೇಶಪಾಂಡೆ ಮತ್ತು ವಿಠಲ್ ಶಿರೋಲೆ ಎಂಬುವವರನ್ನು ಸಹ ಪಿ.ಡಬ್ಲ್ಯೂ 2 ಹಾಗೂ 3 ಎಂಬುದಾಗಿ ವಿಚಾರಣೆ ನಡೆಸಿದ್ದಾನೆ. ತನ್ನ ವಾದದ ಸಮರ್ಥನೆಯಲ್ಲಿ ಅವನು ನಿಶಾನೆ ಪಿ.1 ರಿಂದ 8 ಆಗಿರುವ 8 ದಾಖಲೆಗಳ ಮೇಲೆ ಅವಲಂಬಿತನಾಗಿದ್ದು, ಅವುಗಳಲ್ಲಿ ನಿಶಾನೆ ಪಿ.1 ಮಾರಾಟದ ಒಪ್ಪಂದವಾಗಿದೆ, ನಿಶಾನೆ ಪಿ.2 ಹಕ್ಕುಗಳ ದಾಖಲೆಯಾಗಿದೆ, ನಿಶಾನೆ ಪಿ.3 ಕಾನೂನುಬದ್ಧ ನೋಟೀಸಾಗಿದೆ, ನಿಶಾನೆ ಪಿ.4 ವಿಠೋಬ ಶಿರೋಲೆಯ ಮರಣ ದಾಖಲೆಯಾಗಿದೆ ಹಾಗೂ ಇತರ ದಾಖಲೆಗಳು ನಿಶಾನೆ ಪಿ.6 ರಿಂದ ಪಿ.8 ರ ವರೆಗಿವೆ. ಪ್ರತಿವಾದಿಗಳ ಪರವಾಗಿ, 1ನೇ ಪ್ರತಿವಾದಿಯನ್ನು ಡಿ.ಡಬ್ಲ್ಯೂ.1 ಎಂಬುದಾಗಿ ವಿಚಾರಣೆ ಮಾಡಲಾಗಿದೆ ಮತ್ತು ಆಕೆಯು ತನ್ನ ವಾದದ ಸಮರ್ಥನೆಯಲ್ಲಿ ಇತರ ಇಬ್ಬರು ಸಾಕ್ಷಿದಾರರನ್ನು ಸಹ, ಎಂದರೆ, ಜ್ಯೋತಿ ಖೋಟ್‌ರನ್ನು ಡಿ.ಡಬ್ಲ್ಯೂ.2 ಎಂದು ಮತ್ತು ಶಂಕರ್ ಭೋಸಲೆಯನ್ನು ಡಿ.ಡಬ್ಲ್ಯೂ.3 ಎಂದು ವಿಚಾರಣೆ ಮಾಡಿದ್ದಾಳೆ ಹಾಗೂ ಆಕೆಯು ತನ್ನ ಸಾಕ್ಷ್ಯದ ಸಮರ್ಥನೆಯಲ್ಲಿ ಎಲ್ಲಾ 13 ದಾಖಲೆಗಳನ್ನು ಹಾಜರುಪಡಿಸಿದ್ದಾಳೆ.

5. ವಾದಗಳ ಆಧಾರದ ಮೇಲೆ, ದಾಖಲೆಯಲ್ಲಿ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನಾಧರಿಸಿ, ಅಧಿವಿಚಾರಣಾ ನ್ಯಾಯಾಲಯವು, ವಿಠೋಬನಿಂದ ಬರೆದುಕೊಡಲಾಗಿರುವ ಮಾರಾಟದ ಒಪ್ಪಂದ ಪತ್ರ ಮತ್ತು ಅವನಿಗೆ ವಾದಿಯಿಂದ ಪಾವತಿಸಲಾಗಿರುವ ರೂ.1,30,000/– ಮೊತ್ತದ ಮುಂಗಡ ಹಣ, ಮಾರಾಟ ವ್ಯವಹಾರವನ್ನು ಪೂರ್ಣಗೊಳಿಸಲು ಸಿದ್ಧತೆ ಹಾಗೂ ಇಚ್ಛೆಗೆ ಸಕಾರಾತ್ಮಕವಾಗಿ ಉತ್ತರಿಸಲಾಗಿರುವುದಕ್ಕೆ ತೀರ್ಮಾನಿಸಲು ಕ್ರಮ ಕೈಗೊಂಡಿತು. ವಾದಿಯು ಖಾಲಿ ಹಾಳೆಯ ಮೇಲೆ ಮೃತ ವಿಠೋಬನ ಸಹಿ ಪಡೆದಿದ್ದಾನೆಂದು ಮತ್ತು ಸ್ವತ್ತಿನ ಮಾರುಕಟ್ಟೆ ಮೌಲ್ಯವು ಮಾರಾಟ ಒಪ್ಪಂದದ ದಿನಾಂಕದಂದು ಇದ್ದಂತೆ, 2 ಲಕ್ಷ ರೂ.ಗಳಿಗಿಂತ ಹೆಚ್ಚಾಗಿದೆ ಎಂಬ ಪ್ರತಿವಾದವನ್ನು ಪರಿಗಣಿಸಲು ರೂಪಿಸಲಾದ 4 ಮತ್ತು 5ನೇ ವಿವಾದಾಂಶಗಳ ಮಟ್ಟಿಗೆ, ನಕಾರಾತ್ಮಕವಾಗಿ

ಉತ್ತರಿಸಲಾಗಿದೆ. ತತ್ಪರಿಣಾಮವಾಗಿ, ಕರಾರಿನ ನಿರ್ದಿಷ್ಟ ಪಾಲನೆಯನ್ನು ಸಕಾರಾತ್ಮಕವಾಗಿ ಮಾಡುವುದಕ್ಕೆ ವಾದಿಯ ಹಕ್ಕನ್ನು ಪರಿಗಣಿಸಲು ರೂಪಿಸಲಾದ 6ನೇ ವಿವಾದಾಂಶಕ್ಕೆ ಉತ್ತರಿಸುವ ಮೂಲಕ, ವಾದಿಯ ದಾವೆಯನ್ನು ಡಿಕ್ರಿಗೊಳಿಸಲಾಗಿದೆ. ಅದು ಆರ್.ಎ ಸಂಖ್ಯೆ 138/2009ರಲ್ಲಿ ಅಪೀಲಿನ ವಸ್ತು ವಿಷಯವಾಗಿದ್ದು, ಅದನ್ನು ಪ್ರಾರಂಭಿಕವಾಗಿ 1 ಮತ್ತು 2ನೇ ಪ್ರತಿವಾದಿಗಳು ಸಲ್ಲಿಸಿದ್ದರು ಹಾಗೂ ತರುವಾಯ 2ನೇ ಪ್ರತಿವಾದಿ ಮರಣ ಹೊಂದಿದ್ದರಿಂದ, ಆಕೆಯ ಮೊಮ್ಮಗನನ್ನು ಪ್ರತಿವಾದಿ ಸಂಖ್ಯೆ 2(ಎ) ಎಂಬುದಾಗಿ ಆಕೆಯ ಕಾನೂನುಬದ್ಧ ಪ್ರತಿನಿಧಿಯಾಗಿ ದಾಖಲೆಯಲ್ಲಿ ಸೇರ್ಪಡೆ ಮಾಡಲಾಯಿತು.

6. ಕೆಳ ಅಪೀಲು ನ್ಯಾಯಾಲಯವು, ಅಧಿಕೃತವಾಗಿ ದಾಖಲಾಗಿರುವ ವಾದ ಪ್ರತಿವಾದ ಪತ್ರಗಳು, ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯದ ಗುಣಾವಗುಣಗಳ ಮರು ವಿವೇಚನೆಯ ಆಧಾರದ ಮೇಲೆ ಪರಿಶೀಲನೆಗಾಗಿ ಒಂದೇ ಒಂದು ಅಂಶವನ್ನು ರೂಪಿಸಿತು. ಅದೆಂದರೆ, ಪ್ರಶ್ನಿತ ತೀರ್ಪು ಕಾನೂನಿನ ದೃಷ್ಟಿಯಲ್ಲಿ ಸಮರ್ಥನೀಯವಾಗಿದೆಯೆ? ಅಥವಾ ಅದು ಹಸ್ತಕ್ಷೇಪವನ್ನು ಅಪೇಕ್ಷಿಸುತ್ತದೆಯೇ? ಎಂಬುದನ್ನು ಪರಿಗಣಿಸುವುದು. ಕೆಳ ಅಪೀಲು ನ್ಯಾಯಾಲಯವು, ಅದನ್ನು ನಕಾರಾತ್ಮಕವಾಗಿ ಉತ್ತರಿಸುವ ಮೂಲಕ 1 ಮತ್ತು 2ನೇ ಪ್ರತಿವಾದಿಗಳು ಸಲ್ಲಿಸಿದ ಅಪೀಲನ್ನು ವಜಾ ಗೊಳಿಸಿತು ಮತ್ತು ತತ್ಪರಿಣಾಮವಾಗಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪನ್ನು ಹಾಗೂ ಡಿಕ್ರಿಯನ್ನು ಎತ್ತಿಹಿಡಿಯಿತು.

7. ಇದರಿಂದ ಬಾಧಿತರಾಗಿ, ಎರಡೂ ಕೆಳನ್ಯಾಯಾಲಯಗಳಿಂದ ಹೊರಡಿಸಲಾದ ತೀರ್ಪು ಮತ್ತು ಡಿಕ್ರಿಯು ಕಾನೂನಿನ ಕಣ್ಣಿನಲ್ಲಿ ಸಮರ್ಥಿತವಾಗುವುದಿಲ್ಲವೆಂಬ ಕಾರಣದಿಂದ 1ನೇ ಪ್ರತಿವಾದಿ ಹಾಗೂ ಮೃತಳಾದ 2ನೇ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿಧಿಯು ಈ ಎರಡನೇ ಅಪೀಲನ್ನು ಸಲ್ಲಿಸಿದ್ದಾರೆ. ಇಎಕ್ಸ್‌ಪಿ.1ರಲ್ಲಿರುವಂತೆ ಆ ಮಾರಾಟ ಒಪ್ಪಂದ ಪತ್ರಕ್ಕೆ ಸಾಕಷ್ಟು ಸ್ಟ್ಯಾಂಪು ಹಚ್ಚದಿದ್ದುದರಿಂದ ಅಧಿವಿಚಾರಣಾ ನ್ಯಾಯಾಲಯವು ಅದನ್ನು ಪರಿಗಣಿಸಿರುವುದಿಲ್ಲವೆಂಬ ಕಾರಣಕ್ಕಾಗಿ ಅವುಗಳನ್ನು (ತೀರ್ಪು ಮತ್ತು ಡಿಕ್ರಿ) ಬದಿಗಿರಿಸಲು ಕೋರಲಾಗಿದೆ. ಮಾರಾಟ ಒಪ್ಪಂದ ಪತ್ರ

ಇ.ಎಕ್ಸ್.ಪಿ.1 ಅಡಿಯಲ್ಲಿ ದಾವೆಯ ಸ್ವತ್ತಿನ ಸ್ವಾಧೀನವನ್ನು ನೀಡುತ್ತಿರುವುದರಿಂದ ಒಪ್ಪಂದ ಪತ್ರಕ್ಕಾಗಿ ಮೌಲ್ಯಾನುಸಾರ ಶುಲ್ಕವನ್ನು ಪಾವತಿಸಲು ಅಗತ್ಯಪಡಿಸಿದ್ದು, ಅದರ ಬದಲಿಗೆ ರೂ.200ರ ನಿಗದಿತ ಸ್ಟ್ಯಾಂಪ್ ಶುಲ್ಕವನ್ನು ಪಾವತಿಸಲಾಗಿದೆ. ಆದುದರಿಂದ ಪಾವತಿಸಬಹುದಾದ ಸ್ಟ್ಯಾಂಪ್ ಶುಲ್ಕದಲ್ಲಿನ ಕೊರತೆಯನ್ನು ನ್ಯಾಯ ನಿರ್ಣಯ ಮಾಡದೆ, ನಿರ್ದಿಷ್ಟ ಪಾಲನೆಗಾಗಿನ ಅವನ ಕೋರಿಕೆಯನ್ನು ಪರಿಗಣಿಸಲು ಒಪ್ಪಂದ ಪತ್ರವನ್ನು ಅವಲಂಬಿಸತಕ್ಕದ್ದಲ್ಲ.

8. ಎರಡನೇ ಕಾರಣವೆಂದರೆ, ಒಪ್ಪಂದದ ಸುಸಂಬದ್ಧ ಸಮಯದಲ್ಲಿ ದಾವೆಯ ಅನುಸೂಚಿತ ಸ್ವತ್ತನ್ನು ಮದಭಾವಿ ಸಹಕಾರ ಸಂಘದ ಹೆಸರಿಗೆ ವಹಿಸಲು ಕ್ರಮ ಕೈಗೊಳ್ಳಲಾಯಿತು. ಆದುದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 32(2)ನೇ ಪ್ರಕರಣದಡಿ, ಸದರಿ ಸಂಘದ ಪೂರ್ವಾನುಮತಿಯಿಲ್ಲದೆ, ದಾವೆಯ ಅನುಸೂಚಿತ ಸ್ವತ್ತನ್ನು ಹಸ್ತಾಂತರಿಸಲು ಹಾಗೂ ಅಷ್ಟೇ ಅಲ್ಲದೆ, ಕೆಳ ಅಪೀಲು ನ್ಯಾಯಾಲಯದಲ್ಲಿ ಹೆಚ್ಚುವರಿ ದಾಖಲೆಗಳ ಹಾಜರುಪಡಿಸುವಿಕೆಗಾಗಿ ಅರ್ಜಿ ಸಲ್ಲಿಸಲಾಗಿದ್ದು, ಅದನ್ನು ಪರಿಗಣಿಸಲಿಲ್ಲವೆಂಬ ಕಾರಣಕ್ಕಾಗಿ ಮಾರಾಟಗಾರನಿಗೆ ನಿಷೇಧ ಹೇರಲಾಗಿತ್ತು. ಆದುದರಿಂದ ಹೆಚ್ಚುವರಿ ದಾಖಲೆಗಳನ್ನು ಪರಿಗಣಿಸದೆ ಅಪೀಲನ್ನು ತಿರಸ್ಕರಿಸುವುದು ತಪ್ಪಾಗುತ್ತದೆ. ಆದುದರಿಂದ ಕೆಳ ಅಪೀಲು ನ್ಯಾಯಾಲಯದಿಂದ ಹೊರಡಿಸಲಾದ ತೀರ್ಪು ಹಾಗೂ ಡಿಕ್ರಿಯನ್ನು ಬದಿಗಿರಿಸಬೇಕಾಗುತ್ತದೆ. ನಿರ್ದಿಷ್ಟ ಪಾಲನೆಯ ಮಂಜೂರಾತಿ ಕೋರಿಕೆಯನ್ನು ಪರಿಗಣಿಸುವ ಮುನ್ನ ನಿರ್ದಿಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿನ 20ನೇ ಉಪಬಂಧವನ್ನು ಪರಿಶೀಲಿಸಿರುವುದಿಲ್ಲ.

9. ಅಪೀಲುದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು. ಎರಡೂ ಕೆಳ ನ್ಯಾಯಾಲಯಗಳ ತೀರ್ಪುಗಳನ್ನು ಹಾಗೂ ಅಷ್ಟೇ ಅಲ್ಲದೆ, ಎರಡೂ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರಿಂದ ಈ ನ್ಯಾಯಾಲಯಕ್ಕೆ ಒದಗಿಸಲಾಗಿದ್ದ ವಾದ–ಪ್ರತಿವಾದ ಪತ್ರಗಳನ್ನು ಹಾಗೂ ಸಾಕ್ಷ್ಯವನ್ನು ಅವಗಾಹಿಸಲಾಯಿತು. ಅದನ್ನು ಪರಿಶೀಲಿಸುವಾಗ, ಈಗ ಮಂಡಿಸಲಾದ

ಆಧಾರಗಳನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ ಹೇಳಲಾಗಿಲ್ಲವೆಂದು ಕಂಡು ಬಂದಿದೆ. ವಾಸ್ತವವಾಗಿ, ಅಧಿವಿಚಾರಣಾ ನ್ಯಾಯಾಲಯದಲ್ಲಿ ಲಿಖಿತ ಹೇಳಿಕೆಯಲ್ಲಿನ ನಿರ್ದಿಷ್ಟ ನಿಲುವು ಏನೆಂದರೆ, ಇಡೀ ಒಪ್ಪಂದ ಪತ್ರವನ್ನು ನಿರಾಕರಿಸಲಾಯಿತು ಮತ್ತು ಒಪ್ಪಂದ ಪತ್ರವನ್ನು ಸ್ವೀಕರಿಸಿದ್ದರೂ ಸಹ, ಅದು ಮೃತ ವಿಠೋಬನಿಂದ ಖಾಲಿ ಹಾಳೆಯ ಮೇಲೆ ಮೊದಲೇ ತೆಗೆದುಕೊಂಡಿದ್ದ ಸಹಿ ಮಾತ್ರವಾಗಿದೆ ಹಾಗೂ ಒಪ್ಪಂದ ಪತ್ರದ ಉಳಿದ ಭಾಗವೆಲ್ಲ ಕೈಚಳಕವಾಗಿದೆಯೆಂದು ಪರ್ಯಾಯವಾಗಿ ವಾದಿಸಲಾಯಿತು. ಅಧಿವಿಚಾರಣಾ ನ್ಯಾಯಾಲಯದಲ್ಲಿ ಹಾಗೆ ಪ್ರತಿವಾದಿಸಿದ್ದರೂ, ಮೃತ ವಿಠೋಬ ಕೆಟ್ಟ ಚಟಗಳ ದಾಸನಾಗಿದ್ದನೆಂದು ಮತ್ತು ಆ ಒಪ್ಪಂದವನ್ನು ಅವನು ಬರೆದುಕೊಟ್ಟಿರಲಿಲ್ಲವೆಂದು ಹಾಗೂ ಅದನ್ನು ಮೂಲ ದಾವೆಯಲ್ಲಿ ವಾದಿಯು ಸೃಷ್ಟಿಸಿದ್ದಾನೆ ಅಥವಾ ಹುಟ್ಟಿಸಿದ್ದಾನೆಂದು ಸಮರ್ಥಿಸಲು ಯಾವುದೇ ಸಾಕ್ಷ್ಯವನ್ನು ಮಂಡಿಸಿಲ್ಲ. ಅಧಿವಿಚಾರಣಾ ನ್ಯಾಯಾಲಯವು ವಾದ–ಪ್ರತಿವಾದ ಪತ್ರಗಳ ಹಾಗೂ ಸಾಕ್ಷ್ಯದ ಗುಣಾವಗುಣಗಳನ್ನು ವಿವೇಚಿಸುವಾಗ, ಪ್ರತಿವಾದಿಗಳು ಪ್ರತಿವಾದದ ರೂಪದಲ್ಲಿ ದುಡುಕಿನ ಆಪಾದನೆಗಳನ್ನು ಮಾಡಿದ್ದರೂ, ಅವುಗಳನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ಹಾಗಾಗಿ, ಅಧಿವಿಚಾರಣಾ ನ್ಯಾಯಾಲಯವು 1 ರಿಂದ 3ರ ವರೆಗಿನ ವಿವಾದಾಂಶಗಳನ್ನು ಪರಿಗಣಿಸುವ ಮೂಲಕ ವಾದ–ಪ್ರತಿವಾದ ಪತ್ರಗಳ ಹಾಗೂ ಸಾಕ್ಷ್ಯದ ಗುಣಾವಗುಣಗಳನ್ನು ವಿವೇಚಿಸುವಾಗ, ಸದರಿ ಪ್ರತಿವಾದವನ್ನು ಸರಿಯಾಗಿಯೇ ತಿರಸ್ಕರಿಸಿದೆ.

10. ಅದೇ ರೀತಿ ಸಿದ್ಧವಿರುವಿಕೆ ಮತ್ತು ಇಚ್ಛಿಸುವಿಕೆಯ ಬಗೆಗಿನ ಪ್ರತಿವಾದಕ್ಕೆ ಸಂಬಂಧಿಸಿದಂತೆ, ಈ ಎರಡನೇ ಅಪೀಲಿನಲ್ಲಿ ಒಪ್ಪಂದದ ದಿನಾಂಕದಂದು ಇದ್ದಂತೆ ವಾದಿಯ ಸಂಬಳವು ದಿನಕ್ಕೆ ರೂ.500/– ಆಗಿದ್ದು, ಮಾರಾಟದ ಬಾಕಿ ಹಣ ಪಾವತಿಸಲು ಸಾಕಷ್ಟು ನಿಧಿಗಳನ್ನು ಹೊಂದಿರುವುದಿಲ್ಲ. ವಾದಿಯ ಸಂಬಳವು ದಿನಕ್ಕೆ ರೂ.500/– ಎಂದು ಅಂಗೀಕರಿಸಿದಲ್ಲಿ, 2001ನೇ ವರ್ಷದಲ್ಲಿ ವಾದಿಯ ಸಂಬಳ ರೂ.15,000/– ಆಗಿರುತ್ತದೆ. ಅಂಥ ಸಂಬಳವು ಅವನಿಗೆ ಲಭ್ಯವಾಗುತ್ತಿರುವಾಗ ಅಧಿವಿಚಾರಣಾ ನ್ಯಾಯಾಲಯವು ಅವನಿಗೆ ಮಾರಾಟದ ಬಾಕಿ ಹಣ ಪಾವತಿಸಲು ಇರುವ ಸಾಮರ್ಥ್ಯವನ್ನು ಮತ್ತು ಅವನ ಸಿದ್ಧವಿರುವಿಕೆ

ಹಾಗೂ ಇಚ್ಛೆಸುವಿಕೆಯನ್ನು ಸರಿಯಾಗಿಯೇ ಒಪ್ಪಿಕೊಂಡಿದೆ. ಸ್ಟ್ಯಾಂಪು ಸಾಕಷ್ಟು ಹಾಕಿರದಿದ್ದುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ವಾದಿಯ ಸಾಕ್ಷ್ಯವನ್ನು ದಾಖಲಿಸುವ ಸಮಯದಲ್ಲಿ ಪ್ರತಿವಾದಿಯು ಸದರಿ ದಾಖಲೆಯ ಗುರುತಿಸುವಿಕೆಯನ್ನು ನಿರಾಕರಿಸಿರಲಿಲ್ಲವೆಂದು ಕಂಡುಬಂದಿದೆ. ಹಾಗಿದ್ದರೂ, ವಾದವಿವಾದಗಳ ಹಂತದಲ್ಲಿ ಇಡೀ ಸಾಕ್ಷ್ಯವನ್ನು ದಾಖಲಿಸಿದ ನಂತರ, ಸದರಿ ದಾಖಲೆಗೆ ಸೂಕ್ತವಾಗಿ ಸ್ಟ್ಯಾಂಪು ಹಚ್ಚಿರುವುದಿಲ್ಲವೆಂದು ನಿರ್ಧರಿಸಲು ಅರ್ಜಿಯನ್ನು ಸಲ್ಲಿಸಲಾಗಿದೆ.

11. ಸದರಿ ಆಕ್ಷೇಪಣೆಯನ್ನು ಅಧಿವಿಚಾರಣಾ ನ್ಯಾಯಾಲಯವು ಅಧಿಕಾರ ಬಲದಿಂದ ತಳ್ಳಿಹಾಕಿದಾಗ, ಅದು ಡಬ್ಲ್ಯೂ.ಪಿ. ಸಂಖ್ಯೆ 13617/2008ರಲ್ಲಿ ರಿಟ್ ಅರ್ಜಿಯ ವಸ್ತು ವಿಷಯವಾಗಿದ್ದು, ಆ ತರುವಾಯ ಕಾನೂನು ಕ್ರಮ ಕೈಗೊಳ್ಳದಿದ್ದಕ್ಕಾಗಿ ವಜಾಗೊಂಡಿತು. ಇದರಿಂದ, ಅಂಥ ಪ್ರತಿವಾದವನ್ನು ಮಂಡಿಸಿದ್ದರೂ, ದಾಖಲೆಯನ್ನು ಗುರುತಿಸುವಾಗಲಾಗಲೀ ಅಥವಾ ತರುವಾಯದ ಹಂತದಲ್ಲಾಗಲೀ ಡಬ್ಲ್ಯೂ.ಪಿ.ಸಂಖ್ಯೆ 13617/2008ರಲ್ಲಿ ಅದನ್ನು ಪ್ರಶ್ನಿಸಿದಾಗ ಅದನ್ನು ಅನುಸರಿಸಿಲ್ಲವೆಂದು ಕಂಡುಬಂದಿದೆ. ಹೀಗಾಗಿ ಅದನ್ನು ಈ ಎರಡನೇ ಅಪೀಲಿನಲ್ಲಿ ವಾದಿಸಲು ಅಪೀಲುದಾರನಿಗೆ ಅವಕಾಶವಿಲ್ಲ.

12. ಈ ತೀರ್ಪನ್ನು ವಿರೋಧಿಸಲು ಎತ್ತಲಾದ 3ನೇ ಆಧಾರಕ್ಕೆ ಸಂಬಂಧಿಸಿದಂತೆ, ಅದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 32(2)ನೇ ಪ್ರಕರಣದ ಉಪಬಂಧವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

> **32. ಕೆಲವು ಆಸ್ತಿಗಳ ಮೇಲೆ ಸಹಕಾರ ಸಂಘದ ಮೊಟ್ಟಮೊದಲ ಹೊಣೆ.–** (2) ಯಾರೇ ವ್ಯಕ್ತಿಯು, ಹೊಣೆಯನ್ನು ನಿರ್ಧರಿಸುವ ಸಹಕಾರ ಸಂಘದ ಲಿಖಿತ ಪೂರ್ವಾನುಮತಿ ಹೊಂದಿರದೆ, (1)ನೇ ಉಪ–ಪ್ರಕರಣದಡಿ ಹೊಣೆಗೆ ಒಳಪಟ್ಟ ಯಾವುದೇ ಸ್ವತ್ತನ್ನು ವರ್ಗಾಯಿಸತಕ್ಕದ್ದಲ್ಲ.

ಅದನ್ನು ಪರಿಶೀಲಿಸುವಾಗ ಹೊಣೆಯು, ಸ್ವತ್ತಿನ ವರ್ಗಾವಣೆಯ ಕಾರ್ಯವಿಧಾನದಲ್ಲಿ ಬರುತ್ತದೆ. ಆದರೆ ಅದು ಸದರಿ ಸ್ವತ್ತಿನ ಮಾರಾಟಕ್ಕಾಗಿ ಒಪ್ಪಂದ ಮಾಡಿಕೊಳ್ಳಲು ಮಾರಾಟಗಾರನನ್ನು ತಡೆಯುವುದಿಲ್ಲವೆಂದು ಸ್ಪಷ್ಟವಾಗಿ ಕಂಡುಬಂದಿದೆ. ಈಗಿನ ಪ್ರಕರಣದಲ್ಲಿ ಮಾರಾಟ ಒಪ್ಪಂದದಡಿ ಗಣನಾರ್ಹ ಹಣ ಪಾವತಿ ಮಾಡಿದ್ದಾಗ, ದಾವೆಯ ಅನುಸೂಚಿತ ಸ್ವತ್ತಿನ ವಿರುದ್ಧ ಬಾಕಿ ಇರುವ ಎಲ್ಲಾ ಹೊಣೆಗಳ ನಿರ್ವಹಣೆಯನ್ನು ಖಾತರಿಪಡಿಸತಕ್ಕದ್ದು ಮತ್ತು ಆ ಸ್ವತ್ತನ್ನು ಮೂಲ ದಾವೆಯಲ್ಲಿ ವಾದಿಯ ಪರವಾಗಿ ಶುಲ್ಕರಹಿತವಾಗಿ ನೀಡತಕ್ಕದ್ದೆಂದು ಒಪ್ಪಂದದ ಅಡಿಯಲ್ಲಿನ ಪಕ್ಷಕಾರರ ನಡುವೆ ಸ್ಪಷ್ಟವಾಗಿ ಅರ್ಥೈಸಿಕೊಳ್ಳಲಾಗಿದೆ. ಆದುದರಿಂದ ಅಂಥ ಹೊಣೆಯಿದ್ದರೂ ಸಹ ಅದನ್ನು ತಾನಾಗಿಯೇ ಚುಕ್ತಾ ಮಾಡುವ ಕರ್ತವ್ಯ ಮಾರಾಟಗಾರ ವಿರೋಬ ಶಿರೋಲೆಯ ಮೇಲಿತ್ತು. ಅದು ಚುಕ್ತಾ ಆಗಿರದಿದ್ದಲ್ಲಿ, ಅದನ್ನು ವಾದಿಯ ಬಳಿ ಲಭ್ಯವಿದ್ದ ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ಪಾವತಿಸಬೇಕಿದ್ದ, ಬಾಕಿ ಹಣದಿಂದ ಸಂಘಕ್ಕೆ ಬರಬೇಕಾಗಿದ್ದ ಸದರಿ ಹಳೆಯ ಬಾಕಿಯನ್ನು ಪಾವತಿಸಲು ಹಾಗೂ ತನ್ನ ಹೆಸರಿನಲ್ಲಿ ಕ್ರಯಪತ್ರ ಬರೆದುಕೊಡುವುದಕ್ಕೆ ಮುಂಚೆ ಅದನ್ನು ಚುಕ್ತಾ ಮಾಡಲು ವಾದಿಗೆ ತಡೆಯೊಡ್ಡುವುದಿಲ್ಲ. ಸಂಘಕ್ಕೆ ಬಾಕಿ ಬರಬೇಕಾದ ಹಣ ವಸೂಲಿಗಾಗಿ ಸಂಘದ ಹಿತಾಸಕ್ತಿಯನ್ನು ಕಾಪಾಡಲು ಸದರಿ ಉಪಬಂಧವಿದೆಯೇ ಹೊರತು ಸ್ವತ್ತಿನ ಮಾಲೀಕನ ಹಕ್ಕನ್ನು ತಗ್ಗಿಸಲು ಅಲ್ಲವಾದ್ದರಿಂದ ಯಾವುದೇ ಸಂದರ್ಭದಲ್ಲಿ ವ್ಯವಹಾರ ಪೂರ್ತಿಯಾಗುವ ಕಾರ್ಯವಿಧಾನದಲ್ಲಿ ಅದು ಬರುವುದಿಲ್ಲ.

13. ವಿಷಯದ ಆ ದೃಷ್ಟಿಕೋನದಿಂದ ಈ ನ್ಯಾಯಾಲಯವು, ಈ ದಾವೆಯ ವಸ್ತು ವಿಷಯವಾಗಿರುವ ಮಾರಾಟ ಒಪ್ಪಂದದ ನಿರ್ದಿಷ್ಟ ಪಾಲನೆಯ ಅನುದಾನವನ್ನು ಪರಿಗಣಿಸಲು ಅದು ಅಡ್ಡಿಯಾಗುವುದಿಲ್ಲವೆಂದು ನಿರ್ಣಯಿಸಿದೆ. ಹಾಗಿದ್ದರೂ, ಸದರಿ ಆಧಾರವನ್ನು ತಿರಸ್ಕರಿಸುವಾಗ, ಈ ನ್ಯಾಯಾಲಯವು, ಡಿಕ್ರಿಯನ್ನು ಅನುಸರಿಸಿ ದಾವೆಯ ಸ್ವತ್ತಿನ ಮಾರಾಟದ ಅಮಲ್ಜಾರಿಯನ್ನು ಕೋರುವ ಮುನ್ನ, ದಾವೆಯ ಅನುಸೂಚಿತ ಸ್ವತ್ತಿನ ಭದ್ರತೆಗಾಗಿ ಸೃಜಿಸಲಾದ ಯಾವುದಾದರೂ ಹೊಣೆಯನ್ನು ತನ್ನ ಹೆಸರಿನಲ್ಲಿ, ದಾವೆಯ ಸ್ವತ್ತಿನ ಮಾರಾಟದ ಅಮಲ್ಜಾರಿಯನ್ನು ಕೋರುವ

ಮುನ್ನ ಚುಕ್ತಾ ಮಾಡಲಾಗಿದೆಯೆಂಬುದನ್ನು ಖಚಿತಪಡಿಸಲು ಮದಭಾವಿ ಸಹಕಾರ ಸಂಘವನ್ನು ಭೇಟಿ ಮಾಡಲು ವಾದಿಗೆ ಅವಕಾಶವಿದೆ.

14. ಹೆಚ್ಚುವರಿ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ, ಅಂಥ ಅರ್ಜಿಯನ್ನು ಸಲ್ಲಿಸಿದ್ದರೂ ಸಹ, ಹೆಚ್ಚುವರಿ ಸಾಕ್ಷ್ಯ ರೂಪದಲ್ಲಿ ಹಾಜರುಪಡಿಸಲು ಕೋರಲಾಗಿರುವುದೇನೆಂದರೆ, ಅದು ನಿರ್ದಿಷ್ಟ ಪಾಲನೆಗಾಗಿನ ದಾವೆಯ ಡಿಕ್ರಿಗೆ ತರುವಾಯ ವಿಭಜನೆಗಾಗಿ ಸಲ್ಲಿಸಲಾದ ವಾದಪತ್ರದ ಪ್ರತಿಯೆಂದು ಸ್ಪಷ್ಟವಾಗಿ ಕಂಡುಬಂದಿದ್ದು, 2ನೇ ಪ್ರತಿವಾದಿ ಮತ್ತು ಅವಳ ಮಗಳು ಅಂದರೆ 1ನೇ ಪ್ರತಿವಾದಿಯ ತಾಯಿಯ ವಿರುದ್ಧದ ಸದರಿ ದಾವೆಯು, ಒ.ಎಸ್.ಸಂಖ್ಯೆ 35/2002ರಲ್ಲಿ ವಾದಿಯಿಂದ ಕೈಗೊಳ್ಳಲಾದ ವ್ಯವಹರಣೆಗಳನ್ನು ಸ್ಥಗಿತಗೊಳ್ಳುವಂತೆ ಮಾಡುವ ಸ್ಪಷ್ಟ ಉದ್ದೇಶ ಹೊಂದಿರುವುದಾಗಿದೆಯೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

15. ಅಪೀಲುದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ. ಅಪೀಲಿನ ಕಾರಣಗಳನ್ನು ಮತ್ತು ಹೆಚ್ಚುವರಿ ದಾಖಲೆಗಳ ಹಾಜರುಪಡಿಸುವಿಕೆಗೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಸಹ ಅವಗಾಹಿಸಲಾಗಿದೆ. ಎರಡೂ ಕೆಳ ನ್ಯಾಯಾಲಯಗಳ ತೀರ್ಪನ್ನು ಪರಿಶೀಲಿಸಿದಾಗ ಕೆಳ ಅಪೀಲು ನ್ಯಾಯಾಲಯವು, ಅದರಲ್ಲಿ ಪರಿಗಣಿಸಲು ರೂಪಿಸಲಾದ ಅಂಶಗಳನ್ನು ನಿರ್ಧರಿಸುವ ಮುನ್ನ, ದಾಖಲೆಯಲ್ಲಿ ಲಭ್ಯವಿರುವ ವಾದ–ಪ್ರತಿವಾದ ಪತ್ರಗಳ ಗುಣಾವಗುಣಗಳನ್ನು ವಿವೇಚನೆ ಮಾಡಲು ಶ್ರಮಿಸಿದೆಯೆಂದು ಕಂಡುಬಂದಿದೆ ಹಾಗೂ ಸದರಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಕೋರಿದ್ದು, ಈಗ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಕೋರಿರುವ ದಾಖಲೆಗಳನ್ನು ಸಹ ಪರಿಶೀಲಿಸಲಾಗಿದೆಯೆಂದು ಕಂಡು ಬಂದಿದೆ.

16. ಅದನ್ನು ಪರಿಶೀಲಿಸುವಾಗ, ವಿಠೋಬ ಶಿರೋಳೆಯ ಕುಟುಂಬದ ಸದಸ್ಯರು ಪರಸ್ಪರರ ವಿರುದ್ಧ ಭಾಗಕ್ಕಾಗಿ ದಾವೆಯನ್ನು ಸಲ್ಲಿಸುವ ಪ್ರಯತ್ನವು, ವಿಠೋಬ

ಶಿರೋಲೆಯು ಬರೆದುಕೊಟ್ಟ ಮಾರಾಟದ ಒಪ್ಪಂದದ ನಿರ್ದಿಷ್ಟ ಪಾಲನೆಯ ಡಿಕ್ರಿ ಕೋರಲು ಮೂಲದಾವೆಯಲ್ಲಿನ ವಾದಿಯ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವಲ್ಲದೆ ಬೇರೇನೂ ಅಲ್ಲವೆಂದು ಕೆಳ ಅಪೀಲು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

17. ದಾವೆಯ ಅನುಸೂಚಿತ ಸ್ವತ್ತು ವಿಠೋಬ ಶಿರೋಲೆಯ ನಿರುಪಾಧಿಕ ಸ್ವತ್ತಾಗಿದ್ದು, ಅದನ್ನು ಹಸ್ತಾಂತರಿಸುವ ಹಕ್ಕು ಅವನಿಗಿತ್ತೆಂದು ಮತ್ತು ಅವನು ಮಾರಾಟದ ಹಣದ ಗಣನಾರ್ಹ ಭಾಗವನ್ನು ಮುಂಗಡವಾಗಿ ಪಡೆಯುವ ಮೂಲಕ ದಾವೆಯ ಸ್ವತ್ತಿನ ಮಾರಾಟಕ್ಕಾಗಿ ಮೂಲ ದಾವೆಯಲ್ಲಿನ ವಾದಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಾನೆ ಎಂಬುದನ್ನು ಎರಡೂ ಕೆಳ ನ್ಯಾಯಾಲಯಗಳು ಸರಿಯಾಗಿ ಪರಿಗಣನೆಗೆ ತೆಗೆದುಕೊಂಡಿವೆ ಹಾಗೂ ಸರಿಯಾಗಿಯೇ ನಿರ್ಣಯವನ್ನು ಕೈಗೊಂಡಿವೆಯೆಂದು ಕಂಡು ಬಂದಿದೆ. ದಾಖಲೆಯಲ್ಲಿ ಲಭ್ಯವಿರುವ ವಾದಪತ್ರಗಳು ಹಾಗೂ ಸಾಕ್ಷ್ಯದಿಂದ ವಾದಿಯ ಬಳಿ ಉಳಿದಿರುವ ಬಾಕಿ ಹಣದ ಮೊತ್ತವು ಅಲ್ಪ ಪ್ರಮಾಣದ್ದೆಂದು ಕಂಡು ಬಂದಿದೆ. ದಾವೆಯ ಸ್ವತ್ತಿನ ಸ್ವಾಧೀನವನ್ನು ಈಗಾಗಲೇ ವಾದಿಗೆ ಕೊಡಲಾಗಿದೆ ಹಾಗೂ ಅವನು ಒಪ್ಪಂದದ ದಿನಾಂಕದಿಂದ ಈ ದಿನದವರೆಗೆ ದಾವೆಯ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದಾನೆ.

18. ವಿಠೋಬ ಶಿರೋಲೆಯ ಕಾನೂನುಬದ್ಧ ವಾರಸುದಾರರು ಅವನ ಪತ್ನಿ ಮತ್ತು ವಯಸ್ಸಾದ ತಾಯಿಯಲ್ಲದೆ ಬೇರಾರು ಅಲ್ಲವೆಂದು ಹಾಗೂ ದಾವೆಯ ಅನುಸೂಚಿತ ಸ್ವತ್ತು ವಿಠೋಬ ಶಿರೋಲೆಯ ಬಳಿಯಿದ್ದ ಏಕೈಕ ಸ್ವತ್ತಲ್ಲವೆಂದು ಸಹ ತಿಳಿದುಬಂದಿದೆ. ವಾಸ್ತವವಾಗಿ ಅವನ ವಿಧವೆ ಪತ್ನಿಯು ನ್ಯಾಯಾಲಯದ ಮುಂದೆ ಹಾಜರಾಗಿದ್ದು, ವಿಠೋಬ ಶಿರೋಲೆಯ ಕುಟುಂಬಕ್ಕೆ ಇತರೆ ಕೆಲವು ಕೃಷಿ ಜಮೀನುಗಳಿದ್ದು, ಅವನ ಕುಟುಂಬದ ಸದಸ್ಯರು ಅವುಗಳ ಸ್ವಾಧೀನ ಹಾಗೂ ಉಪಭೋಗ ಹೊಂದಿದ್ದಾರೆಂದು ತನ್ನ ವಕೀಲರ ಮುಖಾಂತರ ದೃಢಪಡಿಸಿದ್ದಾಳೆ. ಅಧಿವಿಚಾರಣಾ ನ್ಯಾಯಾಲಯ ಹಾಗೂ ಕೆಳ ಅಪೀಲು ನ್ಯಾಯಾಲಯ ಈ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ನಿರ್ದಿಷ್ಟ ಪಾಲನೆಯನ್ನು

ಅಂಗೀಕರಿಸಿದ ಸಂದರ್ಭದಲ್ಲಿ ಪಕ್ಷಕಾರರಿಗೆ ಉಂಟಾಗಿರಬಹುದಾದ ತುಲನಾತ್ಮಕ ಸಂಕಷ್ಟವನ್ನು ಸಹ ಪರಿಗಣಿಸಿ, ಸರಿಯಾಗಿಯೇ ಡಿಕ್ರಿಗೊಳಿಸಿವೆಯೆಂಬುದನ್ನು ಸಹ ಪರಿಗಣಿಸಲಾಗಿದೆ. ಆದುದರಿಂದ, ನಿರ್ದಿಷ್ಟ ಪರಿಹಾರ ಅಧಿನಿಯಮದ 20ನೇ ಪ್ರಕರಣವನ್ನು ಪರಿಶೀಲಿಸಿಲ್ಲವೆಂದು ಮಂಡಿಸಿರುವ ಆಧಾರವು ಸರಿಯಾದುದಲ್ಲ.

19. ಈ ಎರಡನೇ ಅಪೀಲನ್ನು ಅಂಗೀಕರಿಸಲು ಈ ನ್ಯಾಯಾಲಯದ ಮೊರೆ ಹೋದ ಅಪೀಲುದಾರನ ಪರ ಮಾನ್ಯ ವಕೀಲರು ಈ ನ್ಯಾಯಾಲಯವು ನೀಡಿದ ಎರಡು ತೀರ್ಪುಗಳ ಮೇಲೆ ಅವಲಂಬಿತರಾಗಿದ್ದಾರೆ.

(i) ಜತೀಂದರ್ ಸಿಂಗ್ ಮತ್ತು ಇನ್ನೊಬ್ಬರು (ತಾಯಿಯಿಂದ ಪ್ರತಿನಿಧಿತ ಅಪ್ರಾಪ್ತ) -ವಿರುದ್ಧ- ಮೆಹರ್‌ಸಿಂಗ್ ಮತ್ತು ಇತರರು ಜೊತೆಗೆ, ಬಲಬೀರ್‌ಸಿಂಗ್ ಮತ್ತು ಇನ್ನೊಬ್ಬರು -ವಿರುದ್ಧ- ಜತೀಂದರ್ ಸಿಂಗ್ ಹಾಗೂ ಇನ್ನೊಬ್ಬರು ವಿಷಯದಲ್ಲಿ ಎಐಆರ್ 2009 ಎಸ್‌ಸಿ 354.

(ii) ನಿಂಗಪ್ಪ -ವಿರುದ್ಧ- ಶಿವಪ್ಪ ಹಾಗೂ ಇತರರು ವಿಷಯದಲ್ಲಿ 2015(1)ಕೆಸಿಸಿಆರ್ 292.

20. ಅದನ್ನು ಪರಿಶೀಲಿಸಿದಾಗ, ಮೇಲೆ ಹೇಳಲಾದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 27ನೇ ನಿಯಮದ 41ನೇ ಕ್ರಮಾದೇಶದಡಿ ಹಾಜರುಪಡಿಸಲಾದ ಹೆಚ್ಚುವರಿ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ಹೆಚ್ಚುವರಿ ಸಾಕ್ಷ್ಯವು ಪ್ರತಿವಾದಿಗಳಿಂದ ಮತ್ತು ಅವರ ನಡುವೆ ಪ್ರಾರಂಭವಾದ ತರುವಾಯದ ವ್ಯಾಜ್ಯೆಯನ್ನು ದಾಖಲೆಯಲ್ಲಿ ತರುವುದಾಗಿದೆ. ಅಂದರೆ, ವಿಠೋಬ ಶಿರೋಳೆಯ ಕುಟುಂಬದ ಸದಸ್ಯರು ದಾವೆಯ ಅನುಸೂಚಿತ ಸ್ವತ್ತನ್ನು ಅದರಲ್ಲಿ ಕುಟುಂಬದ ಇತರರು ಪಾಲನ್ನು ಹೊಂದಿರುವಂಥ ಜಂಟಿ ಕುಟುಂಬ ಸ್ವತ್ತೆಂದು ತೋರಿಸಲು ಪ್ರಯತ್ನಿಸುತ್ತಿರುವುದಲ್ಲದೆ ಬೇರೇನೂ ಅಲ್ಲ ಎಂದು ಮೇಲೆ ಹೇಳಲಾದಂತೆ, ಕೆಳ ಅಪೀಲು ನ್ಯಾಯಾಲಯವು, ಮೃತ

ವಿಠೋಬ ಶಿರೋಲೆ ಮತ್ತು ಮೂಲ ದಾವೆಯಲ್ಲಿನ ವಾದಿಯ ನಡುವೆ ಮಾಡಿಕೊಳ್ಳಲಾದ ಮಾರಾಟದ ವ್ಯವಹಾರವನ್ನು ಹೇಗಾದರೂ ಸ್ಥಗಿತಗೊಳಿಸಲು ಪ್ರಯತ್ನಿಸುವಲ್ಲಿ, ಅಧಿವಿಚಾರಣಾ ನ್ಯಾಯಾಲಯದಲ್ಲಿನ ಅಪೀಲುದಾರರ ಸಂಚುಗಾರಿಕೆಯನ್ನು ನೋಡಿದೆ.

21. ವಾಸ್ತವವಾಗಿ, ಈ ನ್ಯಾಯಾಲಯವು, ಪಕ್ಷಕಾರರಿಗೆ ಗಂಭೀರ ಅನ್ಯಾಯ ಉಂಟಾಗುವುದೇ? ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುವಾಗ, ಆ ಸಮಯದಲ್ಲಿ, ಅಪೀಲುದಾರಳ ಪ್ರತ್ಯೇಕ ಸ್ವಾಧೀನ ಮತ್ತು ಉಪಭೋಗದಲ್ಲಿರುವ ಇನ್ನೂ 3 ಎಕರೆಗಳಿಗಿಂತ ಹೆಚ್ಚಿನ ಜಮೀನು ಆಕೆಗೆ ಲಭ್ಯವಿದೆಯೆಂಬುದನ್ನು, ನ್ಯಾಯಾಲಯದ ಮುಂದೆ ಹಾಜರಿರುವ ಅಪೀಲುದಾರಳೊಂದಿಗೆ ನಡೆಸಿದ ಸಮಾಲೋಚನೆಯ ಆಧಾರದ ಮೇಲೆ ಅಪೀಲುದಾರಳ ಪರ ಮಾನ್ಯ ವಕೀಲರು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಸದರಿ ಸ್ವತ್ತು ಜಂಟಿ ಕುಟುಂಬ ಸ್ವತ್ತಾಗಿದೆಯೆಂದು ಹೇಳಲಾಗಿದ್ದರೂ, ಅದನ್ನು ಪ್ರಮಾಣೀಕರಿಸಿ ತೋರಿಸಲು ದಾಖಲೆಯಲ್ಲಿ ಏನೂ ಇಲ್ಲವೆಂದು ಹೇಳಲಾಗಿದೆ. ಇದರಿಂದ ಹೆಚ್ಚುವರಿ ದಾಖಲೆಗಳ ಹಾಜರುಪಡಿಸುವಿಕೆಗಾಗಿ ಅರ್ಜಿ ಸಲ್ಲಿಸಿರುವುದು ಮೂಲ ದಾವೆಯಲ್ಲಿನ ಪ್ರತಿವಾದಿಗಳ ನಡುವೆ ಭಾಗಕ್ಕಾಗಿನ ದಾವೆಯನ್ನು ನಂಬುವಂತೆ ಮಾಡುವಲ್ಲಿ, ವಾದಪತ್ರದ ಪ್ರತಿಯನ್ನು ಸಲ್ಲಿಸುವ ಮೂಲಕ ನಿರ್ದಿಷ್ಟ ಪಾಲನೆಗಾಗಿ ವಾದಿಯ ಕ್ಲೇಮನ್ನು ಸ್ಥಗಿತಗೊಳಿಸುವ ಒಂದು ಪ್ರಯತ್ನ ಮಾತ್ರವಾಗಿದೆ. ವಿಷಯದ ಆ ದೃಷ್ಟಿಕೋನದಿಂದ ಕೆಳ ಅಪೀಲು ನ್ಯಾಯಾಲಯವು ಸಹ ಸದರಿ ದಾಖಲೆಯನ್ನು ಪುರಸ್ಕರಿಸಿಲ್ಲ.

22. ಈ ಅಪೀಲಿನಲ್ಲಿರುವ ಆಧಾರಗಳ ಸಮರ್ಥನೆಯಲ್ಲಿ ಅಪೀಲುದಾರರು ಅವಲಂಬಿಸಿದ ತೀರ್ಪುಗಳನ್ನು ಪರಿಶೀಲಿಸಿದಾಗ, ಈ ನ್ಯಾಯಾಲಯವು ಮೇಲೆ ಹೇಳಲಾದ ತೀರ್ಪುಗಳು ಈಗಿನ ಮೊಕದ್ದಮೆಯ ಸಂಗತಿಗಳಿಗೆ ಯಾವ ರೀತಿಯಲ್ಲೂ ಅನ್ವಯಿಸುವುದಿಲ್ಲ. ಆದುದರಿಂದ, ಈ ಅಪೀಲನ್ನು ಅಂಗೀಕಾರಕ್ಕಾಗಿ ಪರಿಗಣಿಸಲು ಅದರ ಮೇಲೆ ಅವಲಂಬಿತರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ನಿರ್ಣಯಿಸಿದೆ. ತದನುಸಾರವಾಗಿ, ಈ ಎರಡನೇ ಅಪೀಲನ್ನು ಅಂಗೀಕರಿಸಲು

ಯಾವುವೇ ಸಮರ್ಥನೀಯ ಆಧಾರಗಳನ್ನು ಮಾಡಲಾಗಿಲ್ಲ. ಹಾಗೆಯೇ ಈ ಎರಡನೇ ಅಪೀಲಿನಲ್ಲಿ ಪರಿಶೀಲನೆಗಾಗಿ ಯಾವುದೇ ಕಾನೂನಿನ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

ತದನುಸಾರವಾಗಿ, ಅದನ್ನು ವಜಾಗೊಳಿಸಲಾಗಿದೆ.

---